**ಪಾಠ–8** **ಮೇ 15–21**

# ಒಡಂಬಡಿಕೆ ನ್ಯಾಯಪ್ರಮಾಣ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ವಿ.ಕಾಂಡ 19:6; ಯೆಶಾಯ 56:7; ಇಬ್ರಿ 2:9; ಧ.ಕಾಂಡ 4:13, ಧ.ಕಾಂಡ 10:13, ಆಮೋಸ 3:3, ಆ.ಕಾಂಡ 18:19.

**ಸ್ಮರಣವಾಕ್ಯ : "ಆದುದರಿಂದ ಯುಹೋವನೊಬ್ಬನೇ ದೇವರೆಂದು ತಿಳಿದುಕೊಳ್ಳಬೇಕು. ಆತನು ನಂಬಿಗಸ್ತನಾದ ದೇವರು; ತನ್ನನ್ನು ಪ್ರೀತಿಸಿ ತನ್ನ ಆಜ್ಞೆಗ್ಗಳನ್ನು ಅನುಸರಿಸುವವರಿಗೆ ಮಾಡಿದ ವಾಗ್ದಾನವನ್ನೂ ಕೃಪೆಯನ್ನೂ ಅವರ ಸಂತತಿಯವರಲ್ಲಿ ಸಾವಿರ ತಲೆಗಳವರೆಗೂ ನೆರವೇರಿಸುವವನಾಗಿಯೂ... ಇದ್ದಾನೆಂದು ತಿಳಿದುಕೊಳ್ಳಿರಿ"** (ಧ.ಕಾಂಡ 7:9).

ಕೀರ್ತನೆ 23ನೇ ಸಂಧಿಯಲ್ಲಿ ಒಂದು ಪದವೃಂದವು ದೇವರು ನಮ್ಮನ್ನು ನಡೆಸಬಯಸುತ್ತಾನೆಂದು ಹೇಳುತ್ತದೆ. "ಆತನು ನಮ್ಮನ್ನು ತನ್ನ ಹೆಸರಿಗೆ ತಕ್ಕಂತೆ ನೀತಿಯ ಮಾರ್ಗದಲ್ಲಿ ನಡೆಸುತ್ತಾನೆ" ಎಂದು ದಾವಿದನು 3ನೇ ವಚನದಲ್ಲಿ ಹೇಳುತ್ತಾನೆ. ಆತನು ತನ್ನ ನೀತಿ ಪ್ರಮಾಣದ ಪ್ರಯುಕ್ತ ಎಂದಿಗೂ ತಪ್ಪಾದ ದಾರಿಯಲ್ಲಿ ನಡೆಸುವುದಿಲ್ಲ. ಆತನು ನಮ್ಮ ಜೀವನ ಪರ್ಯಂತವೂ ನಮ್ಮ ಆತ್ಮೀಕ ನಡೆಗೆ ಅಗತ್ಯವಾದ ಸುರಕ್ಷಿತವಾದ ಮಾರ್ಗವನ್ನು ಒದಗಿಸುತ್ತಾನೆ.

"ನೀತಿಯ ಸುರಕ್ಷಿತ" ಮಾರ್ಗಗಳಾವುವು? ಮತ್ತೊಂದು ಕೀರ್ತನೆಯ ಲೇಖಕನು

* **ಈ ವಾರದ ಪಾಠವನ್ನು ಮೇ 22ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.**

ಈ ಪ್ರಶ್ನೆಗೆ ತನ್ನ ಪ್ರಾರ್ಥನಾ ಮನವಿಯ ಮೂಲಕ ಉತ್ತರವನ್ನು ನೀಡುತ್ತಾನೆ; ನಿನ್ನ ಆಜ್ಞೆಗಳ ಮಾರ್ಗದಲ್ಲಿ ನನ್ನನ್ನು ನಡೆಸು ಅವು ನನಗೆ ಸಂತೋಷಕರ–ವಾಗಿದೆ (ಕೀರ್ತನೆ 119:35). "ನಿನ್ನ ಆಜ್ಞೆಗಳೆಲ್ಲಾ ನೀತಿಯೆ" (ಕೀರ್ತನೆ 119:172).

ಮಾನವನ ಅಸ್ತಿತ್ವದ ವಿಶ್ವಾಸ ಘಾತಕದ ಕೆಸರಿನಲ್ಲಿ ದೇವರ ಧರ್ಮಪ್ರಮಾಣವು ಸುರಕ್ಷಿತವಾದ ದೃಢವಾದ ಮಾರ್ಗವಾಗಿದೆ.

ಈ ವಾರದಲ್ಲಿ ನಮ್ಮ ಅಧ್ಯಯನವು ದೇವರನ್ಯಾಯಪ್ರಮಾಣ ಮತ್ತು ಸಿನಾಯಿ ಬೆಟ್ಟದಲ್ಲಿ ಮಾಡಿಕೊಂಡ ಒಡಂಬಡಿಕೆಯಲ್ಲಿ ಅದರ ಸ್ಥಾನದ ಮೇಲೆ ಕೇಂದ್ರೀಕೃತವಾಗಿದೆ.

**ಈ ವಾರದ ಪಕ್ಷಿನೋಟ :** ಇಸ್ರಾಯೇಲ್ಯರು ಆರಿಸಿಕೊಂಡ ಜನಾಂಗವೆಂದರೆ ಏನು ಅರ್ಥ? ಇಸ್ರಾಯೇಲ್ಯರ ಆಯ್ಕೆಯು ನಮ್ಮ ಆಯ್ಕೆಗೆ ಹೋಲಿಕೆಯಾಗಿದೆ ಹೇಗೆ? ಒಡಂಬಡಿಕೆಯಲ್ಲಿ ನ್ಯಾಯಪ್ರಮಾಣವು ಹೇಗೆ ಮುಖ್ಯವಾಗಿದೆ? ಒಡಂಬಡಿಕೆಗೆ ಯಾವ ನಿಬಂಧನೆಗಳೂ ಇಲ್ಲವೆ? ಒಡಂಬಡಿಕೆಯ ಸಂಬಂಧಕ್ಕೆ ವಿಧೇಯತೆಯು ಹೇಗೆ ಅವಿಭಾಜ್ಯ ಅಂಗವಾಗಿದೆ?

**ಭಾನುವಾರ** **ಮೇ 16**

## ಇಸ್ರಾಯೇಲ್ಯರ ಆಯ್ಕೆ (ಧ.ಕಾಂಡ 7:7)

ಇತರೆ ಜನಾಂಗಗಳು ದೇವರನ್ನು ತಿರಸ್ಕಾರ ಮಾಡಿದುದರಿಂದ ದೇವರು ಇಸ್ರಾಯೇಲ್ಯರೊಂದಿಗೆ ಒಡಂಬಡಿಕೆ ಮಾಡಿಕೊಂಡನು ಎಂಬುದಾಗಿ ಇಸ್ರಾಯೇಲ್ಯರ ಸಂಪ್ರದಾಯವು ನಮಗೆ ಬೋಧಿಸುತ್ತದೆ. ಇದಕ್ಕೆ ಸತ್ಯವೇದದಲ್ಲಿ ಯಾವುದೇ ಪುರಾವೆಯಿಲ್ಲದಿದ್ದರೂ ದೇವರು ಇಸ್ರಾಯೇಲ್ಯರನ್ನು ಏಕೆ ಆರಿಸಿಕೊಂಡನು ಎಂಬುದನ್ನು ತಿಳಿಸಲು ಇದು ಸಹಾಯ ಮಾಡುತ್ತದೆ. ಅವರು ಆರಿಸಲ್ಪಟ್ಟುದಕ್ಕೆ ಕಾರಣವೇನೇ ಇರಬಹುದು ಆದರೆ ಅವರು ಹೆಚ್ಚಿನ ಗೌರವಕ್ಕೆ ಅರ್ಹರು ಎಂಬುದಾಗಲೀ ಮತ್ತು ದೇವರು ಅವರಿಗೆ ವಿಶೇಷವಾದ ಅವಕಾಶಕ್ಕೆ ಯೋಗ್ಯರು ಎಂಬುದಾಗಲೀ ಕಾರಣವಲ್ಲ. ದೇವರು ಅವರನ್ನು ತನ್ನ ಜನರೆಂದು ಆರಿಸಿಕೊಳ್ಳುವಂತಹ ಮತ್ತು ಆತನ ಪ್ರೀತಿಗೆ ಯೋಗ್ಯರನ್ನಾಗಿ ಮಾಡುವಂತಹ ಯಾವ ಪುಣ್ಯವಿಶೇಷವನ್ನು ಅವರು ಹೊಂದಿರಲಿಲ್ಲ. ಅವರು ಸಂಖ್ಯೆಯಲ್ಲಿ

ಕೆಲವೇ ಕೆಲವರಾಗಿದ್ದರು. ಮತ್ತೊಂದು ಜನಾಂಗಕ್ಕೆ ಸೇವಕರಾಗಿದ್ದ ಒಂದು ಬುಡಕಟ್ಟು ಜನಾಂಗವಾಗಿದ್ದರು. ಅವರು ರಾಜಕೀಯವಾಗಿ ಮತ್ತು ಯುದ್ಧ ತಂತ್ರಗಾರಿಕೆಯಲ್ಲಿ ದುರ್ಬಲರಾಗಿದ್ದವರು. ಇದರ ಜೊತೆಗೆ ಸಂಸ್ಕೃತಿ ಮತ್ತು ಧರ್ಮವು ಮಿಶ್ರಗುಣದ, ನೀರಸವಾದ ಮತ್ತು ಹೆಚ್ಚು ಪ್ರಭಾವ ಬೀರಲಾದವು-ಗಳಾಗಿದ್ದವು. ಇಸ್ರಾಯೇಲ್ಯರನ್ನು ಆಯ್ಕೆ ಮಾಡಿಕೊಂಡ ಮೂಲಕಾರಣವು ದೇವರಕೃಪೆ ಮತ್ತು ಪ್ರೀತಿಯ ರಹಸ್ಯದಲ್ಲಿ ಉಳಿದು ಬಿಟ್ಟಿದೆ.

ಅದೇ ಸಂದರ್ಭದಲ್ಲಿ ಆರಿಸುವಿಕೆ ಎಂಬ ಆಲೋಚನೆಯ ಬಗ್ಗೆ ಬಹಳ ಎಚ್ಚರಿಕೆ ವಹಿಸಬೇಕಾಗಿದೆ. ಯಾಕೆಂದರೆ ಇದು ಧಾರ್ಮಿಕ ವಿಷಯಗಳನ್ನು ತಪ್ಪಾಗಿ ಅರ್ಥೈಸಿಕೊಳ್ಳುವ ಸಾಧ್ಯತೆಯಿಂದ ತುಂಬಿಕೊಂಡಿದೆ. ದೇವರು ಇಸ್ರಾಯೇಲ್ಯರನ್ನು ಯಾಕೆ ಆರಿಸಿಕೊಂಡನು? ಅವರನ್ನು ವಿಮೋಚಿಸಿ ಇತರರನ್ನು ತಿರಸ್ಕರಿಸಿ ಇಲ್ಲದಂತೆ ಮಾಡುವುದಕ್ಕೆ ಆರಿಸಿಕೊಂಡನೆ? ಅಥವಾ ಅವರನ್ನು ತಮಗೆ ಕೊಟ್ಟದ್ದನ್ನು ಇತರರಿಗೆ ತಲುಪಿಸುವಂತೆ ವಾಹನಗಳಾಗಿ ಆರಿಸಲ್ಪಟ್ಟರೆ? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ನೀಡಲು ಈ ಕೆಳಗಿನ ವಚನಗಳು ಹೇಗೆ ಸಹಾಯ ಮಾಡುತ್ತವೆ?

ವಿ.ಕಾಂಡ 19:6 ______________________________

ಯೆಶಾಯ 56:7 ______________________________

ಇಬ್ರಿಯ 2:9 ______________________________

ಸೆವೆಂತ್ ಡೇ ಅಡ್ವೆಂಟಿಸ್ಟರಾಗಿ ನಾವು ನಮ್ಮನ್ನು ಇಸ್ರಾಯೇಲ್ಯರ ಸ್ಥಾನಕ್ಕೆ ಸಮನಾಗಿ ತಕ್ಕಡಿಯ ಇನ್ನೊಂದು ಕಡೆ ಕುಳಿತಿರುವ ಆಧುನಿಕ ಕಾಲದಲ್ಲಿ ದೇವರಿಂದ ಕರೆಯಲ್ಪಟ್ಟ ಜನರಾಗಿದ್ದೇವೆ. ನಾವು ಕೇವಲ ವಿಮೋಚಿಸಲ್ಪಟ್ಟವರಾಗಿ ಅಲ್ಲ ಆದರೆ ಮೂರು ದೂತರ ಸಂದೇಶವನ್ನು ಇಡೀ ಲೋಕಕ್ಕೆ ಸಾರುವುದಕ್ಕೆ ಆರಿಸಲ್ಪಟ್ಟಿದ್ದೇವೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಮತ್ಯಾರೂ ಹೇಳಲಾಗದ ಯಾವುದೋ ಒಂದು ವಿಷಯವನ್ನು ನಾವು ಹೇಳುವವರಾಗಿದ್ದೇವೆಂದು ನಂಬಿಕೊಂಡಿದ್ದೇವೆ. ಇದು ಪುರಾತನ ಇಸ್ರಾಯೇಲ್ಯರೂ ಸಹಾ ಇದೇ ಸನ್ನಿವೇಶದಲ್ಲಿದ್ದರು. ಇಸ್ರಾಯೇಲ್ಯರನ್ನು ಆರಿಸಿಕೊಂಡ ಉದ್ದೇಶವು ಅವರನ್ನು

ಪ್ರತ್ಯೇಕವಾದ ರಕ್ಷಣೆಯ ಮತ್ತು ವಿಮೋಚನೆಯ ಎಲ್ಲಾ ವಾಗ್ದಾನಗಳನ್ನು ಸಂಗ್ರಹಿಸುವ ಕೂಟವನ್ನಾಗಿ ಮಾರ್ಪಾಟು ಮಾಡುವುದಕ್ಕಲ್ಲ. ಇದಕ್ಕೆ ವ್ಯತಿರಿಕ್ತವಾದ ವಿಷಯವೇನೆಂದರೆ ಯೇಸುಕ್ರಿಸ್ತನು ಇಡೀ ಮಾನವಕುಲಕ್ಕಾಗಿ ಸತ್ತನು ಎಂದು ನಂಬುವುದಾದರೆ (ಇಬ್ರಿಯ 2:9). ದೇವರು ಇಸ್ರಾಯೇಲ್ಯರಿಗೆ ಕೊಟ್ಟ ವಿಮೋಚನೆಯನ್ನು ಇಡೀ ಲೋಕಕ್ಕೆ ಕೊಟ್ಟನು ಎಂದು ನಂಬಬೇಕು. ಈ ವಿಮೋಚನೆಯನ್ನು ಲೋಕದ ಸಮಸ್ತ ಜನರಿಗೂ ತಲುಪಿಸುವ ವಾಹನವಾಗಿ ಇಸ್ರಾಯೇಲ್ಯರು ಇರಬೇಕಾಗಿತ್ತು. ನಮ್ಮ ಸಭೆಯೂ ಅದನ್ನೇ ಮಾಡುವುದಕ್ಕಾಗಿ ಕರೆಯಲ್ಪಟ್ಟಿದೆ.

ಸಭೆಯಲ್ಲಿ ನೀವು ವಹಿಸಬೇಕಾಗಿರುವ ನಿಮ್ಮ ಪಾತ್ರದ ಬಗ್ಗೆ ಗಮನಿಸಿರಿ. ನಾವು ಯಾವ ಕೆಲಸಕ್ಕಾಗಿ ಕರೆಯಲ್ಪಟ್ಟಿದ್ದೇವೆಯೋ ಅದನ್ನು ಪ್ರವರ್ತಿಸಲು ನಾವು ಹೇಗೆ ಸಹಾಯ ಮಾಡಬಹುದು? ನೀವು ಸಕ್ರಿಯವಾಗಿ ಮಾಡಬೇಕಾದ್ದಕ್ಕಿಂತ ಹೆಚ್ಚಾಗಿ ಸಹಾಯ ಮಾಡದಿದ್ದರೆ, ಸ್ವಲ್ಪಮಟ್ಟಿಗೆ ನೀವು ಅದಕ್ಕೆ ಅಡ್ಡಿಯಾಗಿ ನಿಂತಿದ್ದೀರಿ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿರಿ.

**ಸೋಮವಾರ** **ಮೇ 17**

## ಬಂಧಿಸುವಂತಹ ಕಟ್ಟುಗಳು

ನೀವು ಅನುಸರಿಸಬೇಕೆಂದು ಆತನು ನೇಮಿಸಿದ ನಿಬಂಧನೆಯನ್ನು ಅಂದರೆ ಹತ್ತು ಕಟ್ಟಳೆಗಳನ್ನು ನಿಮಗೆ ವಿವರಿಸಿ ಎಂದು ಕಲ್ಲಿನ ಹಲಗೆಗಳಲ್ಲಿ ಕೆತ್ತಿಸಿದ್ದೂ... (ಧ.ಕಾಂಡ 4:13).

ಏನೇ ಆಗಲಿ ಒಡಂಬಡಿಕೆಯು ಎಂದೆಂದಿಗೂ ಕೃಪೆಯ ಒಡಂಬಡಿಕೆ ಎಂಬುದಾಗಿ ಒತ್ತುಕೊಟ್ಟು ಹೇಳಲಾಗುತ್ತಿದೆ, ಅದೇನೆಂದರೆ ನಾವು ಯಾವುದೇ ಯೋಗ್ಯತೆ ಇಲ್ಲದಿದ್ದರೂ ಆತನ ರಕ್ಷಣೆಯ ಸಂಬಂಧದಲ್ಲಿ ಪ್ರವೇಶ ಹೊಂದುವುದು ಆತನ ಅನುಗ್ರಹದ ಫಲಿತಾಂಶವಾಗಿದೆ, ಕೃಪೆಯು ನಾವು ಅವಿಧೇಯರಾಗಿ ನಡೆದುಕೊಳ್ಳಲು ದೊರಕಿದ ಪರವಾನಗಿಯಲ್ಲ. ಇದಕ್ಕೆ ಪ್ರತಿಯಾಗಿ ಹೇಳುವುದಾದರೆ ಒಡಂಬಡಿಕೆ ಮತ್ತು ನ್ಯಾಯಪ್ರಮಾಣ ಒಟ್ಟಾಗಿ ಸೇರಿವೆ, ಅವುಗಳನ್ನು ನಿಜವಾಗಿಯೂ ಪ್ರತ್ಯೇಕಪಡಿಸಲಾಗುವುದಿಲ್ಲ. ಮೇಲೆ ಉದಾಹರಿಸಿದ ವಚನವನ್ನು

ನೋಡಿರಿ. ಇದು ಒಡಂಬಡಿಕೆಯನ್ನು ಮತ್ತು ನ್ಯಾಯಪ್ರಮಾಣವನ್ನು ಹೇಗೆ ಬಿಗಿಯಾಗಿ ಜೋಡಿಸುತ್ತದೆ? ಒಡಂಬಡಿಕೆಗೆ ಆಧಾರ ನ್ಯಾಯ ಪ್ರಮಾಣವೆಂದು ಹೇಗೆ ತೋರಿಸುವಿರಿ?

ಒಡಂಬಡಿಕೆಯೆಂದರೆ ಏನೆಂಬುದಾಗಿ ನೀವು ಆಲೋಚಿಸುವಾಗ ನ್ಯಾಯ ಪ್ರಮಾಣದ ಪರಿಕಲ್ಪನೆಯು ಅದಕ್ಕೆ ಅವಿಭಾಜ್ಯವಾದ ಅಂಗವಾಗಿದೆ ಎಂದು ಹೇಳಿದರೆ ಅರ್ಥಪೂರ್ಣವಾಗುತ್ತದೆ. ನಾವು ಒಡಂಬಡಿಕೆಯನ್ನು ಇತರೆ ವಿಷಯಗಳ ಮಧ್ಯೆ ಒಂದು ಸಂಬಂಧವೆಂದು ಅರ್ಥಮಾಡಿಕೊಂಡರೆ ಕೆಲವು ನಿಯಮಗಳನ್ನು ಮತ್ತು ಗಡಿಗಳನ್ನು ರೂಪಿಸಬೇಕಾಗುತ್ತದೆ.

ಒಂದು ವೈವಾಹಿಕ (ಮದುವೆ) ಸಂಬಂಧವಾಗಲೀ ಇಲ್ಲವೇ ಪಾಲುದಾರಿಕೆಯ ವ್ಯವಹಾರವಾಗಲಿ ನಿರ್ದಿಷ್ಟವಾಗಿ ವ್ಯಕ್ತವಾದ ನಿಯಮಗಳು ಮತ್ತು ಷರತ್ತುಗಳು ಇಲ್ಲದೆ ಹೋದರೆ ಅಥವಾ ಪರಸ್ಪರ ಸಮ್ಮತಿ ಇಲ್ಲದೆ ಹೆಚ್ಚುಕಾಲ ಆ ಸಂಬಂಧವು ಉಳಿಯಲು ಸಾಧ್ಯವಿಲ್ಲ ಅಲ್ಲವೇ? ಈ ಸಂಬಂಧಗಳಲ್ಲಿ ಯಾವುದೇ ಬದಲಾವಣೆ (ವ್ಯತ್ಯಾಸಗಳು) ಆದರೂ ನಿಯಮಗಳು ಮತ್ತು ಷರತ್ತುಗಳನ್ವಯ ನಡೆಯಬೇಕು. ಒಂದುವೇಳೆ ಹಾಗೆ ನಡೆಯದಿದ್ದರೆ ನಿಯಮಗಳ ಅಥವಾ ಕಾನೂನಿನ ಉಲ್ಲಂಘನೆಯಾಗುತ್ತದೆ. ಅಂತಹ ಕಾನೂನು ಕಟ್ಟುನಿಟ್ಟು ಇಲ್ಲದ ಪರಿಸ್ಥಿತಿಯಲ್ಲಿ ಈ ಸಂಬಂಧಗಳು ಎಷ್ಟುಕಾಲ ಉಳಿಯುತ್ತವೆ? ಆದುದರಿಂದ ಇವುಗಳಿಗೆ ಪರಿಮಿತಿಗಳಿರಬೇಕು. ಎಲ್ಲೆಗಳು ಎಳೆಯಲ್ಪಟ್ಟಿರಬೇಕು ಮತ್ತು ನಿಯಮಗಳು ಸ್ಥಾಪಿತವಾಗಿರಬೇಕು. ಇವುಗಳ ಮೂಲಕ ಮಾತ್ರ ಒಂದು ಸಂಬಂಧವನ್ನು ಉಳಿಸಿಕೊಂಡು (ಮುಂದುವರೆಸಿಕೊಂಡು) ಹೋಗಬಹುದು.

ಒಡಂಬಡಿಕೆ ಎಂಬ ಪದವು ವಿವಿಧ ಸಮಾನಾರ್ಥ ಪದಗಳನ್ನು ಒಳಗೊಂಡಿದೆ. ಧರ್ಮಶಾಸ್ತ್ರ (ಕೀರ್ತ 78:10), ನಿಬಂಧನೆಗಳು (ಕೀರ್ತ 50:16) ವಿಧಿಗಳು (ಕೀರ್ತ 25:10), ಆಜ್ಞೆಗಳು (ಕೀರ್ತ 103:18) ಮತ್ತು ದೇವರವಾಕ್ಯ (ಕೀರ್ತ 119:15) ಈ ಎಲ್ಲಾ ಪದಗಳು ಬಹುತೇಕವಾಗಿ ಒಡಂಬಡಿಕೆ ಪದಕ್ಕೆ ಸಮಾನ ಅಥವಾ ಹತ್ತಿರದ ಅರ್ಥವನ್ನು ಹೊಂದಿವೆ. ಒಡಂಬಡಿಕೆ ಪದಗಳು ವಿಶದವಾಗಿ (ಸ್ಪಷ್ಟವಾಗಿ) ದೇವರ ನಿಬಂಧನೆಗಳಿಗೆ, ಕಟ್ಟಳೆಗಳಿಗೆ ಮತ್ತು ಆಜ್ಞೆಗಳಿಗೆ

ಸಮನಾದ ಪದಗಳಾಗಿವೆ. ಇಸ್ರಾಯೇಲ್ಯರೊಂದಿಗೆ ದೇವರು ಮಾಡಿಕೊಂಡ ಒಡಂಬಡಿಕೆಯು ಅವರೊಂದಿಗೆ ವಿಶೇಷವಾದ ಸಂಬಂಧವನ್ನು ಮುಂದುವರೆಸಿಕೊಂಡು ಹೋಗಲು ನಿರ್ಣಾಯಕವಾದ ವಿವಿಧ ಅಗತ್ಯತೆಗಳನ್ನು ಒಳಗೊಂಡಿದೆ. ಇಂದು ಅದು ವ್ಯತ್ಯಾಸಗೊಂಡಿದೆಯೇ?

ನಿಮ್ಮೊಂದಿಗೆ ನಿಕಟವಾದ ಸಂಬಂಧ ಹೊಂದಿರುವವರ ಬಗ್ಗೆ ಆಲೋಚಿಸಿರಿ. ನೀವು ಯಾವುದೇ ನಿಯಮ, ಕಾನೂನು ಕಟ್ಟು ಕ್ರಮಗಳು ಈ ಸಂಬಂಧವನ್ನು ಮುಂದುವರೆಸಿಕೊಂಡು ಹೋಗಲು ಅಗತ್ಯವಿಲ್ಲವೆಂದು ನಾನು ಏನನ್ನು ಬೇಕಾದರೂ ಮಾಡಬಹುದೆಂದು ಅಂದುಕೊಂಡರೆ ಆ ಸಂಬಂಧವು ಏನಾಗುತ್ತದೆ? ನೀವು ಆತನನ್ನು ಪ್ರೀತಿಸುತ್ತೇನೆ, ನನ್ನ ಪ್ರೀತಿಯು ಮಾತ್ರವೇ ನಾನು ಎಂತಹ ಸಂಬಂಧ ಹೊಂದಿದ್ದೇನೆ ಎಂಬುದನ್ನು ತಿಳಿಸುತ್ತದೆ ಎಂದು ಹೇಳಿದರೂ ಸಹಾ ನಿಯಮಗಳು ಅಗತ್ಯವಾಗಿವೆ ಯಾಕೆ? ಚರ್ಚಿಸಿರಿ.

**ಮಂಗಳವಾರ** **ಮೇ 18**

## ಒಡಂಬಡಿಕೆಯ ವ್ಯಾಪ್ತಿಯಲ್ಲಿ ಧರ್ಮಶಾಸ್ತ್ರ (ಧ.ಕಾಂಡ 10:12,13)

ಧರ್ಮಶಾಸ್ತ್ರದ ಬಗ್ಗೆ ನೀವು ಯೋಚನೆ ಮಾಡುವಾಗ ನಿಮ್ಮಲ್ಲಿ ಯಾವ ಆಲೋಚನೆಗಳು ಮೊದಲಿಗೆ ಬರುತ್ತವೆ? ಪೊಲೀಸ್ ಅಧಿಕಾರಿಗಳು, ಸಂಚಾರ ನಿಯಮಗಳು, ನ್ಯಾಯಾಧೀಶರು ಅಥವಾ ಸೆರೆಮನೆ ಯಾವ ಆಲೋಚನೆಗಳು ನಿಮ್ಮ ಮನಸ್ಸಿಗೆ ಬರುತ್ತವೆ? ಅಥವಾ ನಿರ್ಬಂಧಗಳು ನಿಯಮಗಳು, ಅಧಿಕಾರ ಚಲಾಯಿಸುವ ಪೋಷಕರು ಮತ್ತು ಶಿಕ್ಷೆಯಾಗಿರಬಹುದೆ? ಅಥವಾ ಕ್ರಮ, ವ್ಯವಸ್ಥೆ, ಸಾಮರಸ್ಯ, ದೃಢತೆಯಾಗಿರಬಹುದೆ? ಅಥವಾ ಪ್ರೀತಿಯೂ ಸಹಾ ಆಗಿರಬಹುದೆ?

ಇಬ್ರಿಯ ಭಾಷೆಯ "ತೋರ" ಎಂಬ ಪದವು ನಮ್ಮ ಸತ್ಯವೇದದಲ್ಲಿ ಧರ್ಮಶಾಸ್ತ್ರ ಎಂಬುದಾಗಿ ಅನುವಾದಗೊಂಡಿದೆ. ಬೋಧನೆಗಳು ಅಥವಾ ಸೂಚನೆಗಳು ಎಂಬ ಅರ್ಥವನ್ನು ಈ ಪದವನ್ನು ದೇವರು ಕೊಟ್ಟ ನೈತಿಕ ಸಾಮಾಜಿಕ ಅಥವಾ ಧಾರ್ಮಿಕ ನಿಯಮಗಳನ್ನು ಕುರಿತು ಬಳಸುವ ಪದವಾಗಿದೆ. ದೇವರು ತನ್ನ ಜನರಿಗೆ ಕೃಪಾಪೂರ್ಣನಾಗಿ ಅವರ ಜೀವಿತದಲ್ಲಿ ಅವರು ಭೌತಿಕವಾಗಿಯೂ

ಆತ್ಮೀಕವಾಗಿಯೂ ಸಮೃದ್ಧವಾದ ಜೀವನವನ್ನು ಅನುಭವಿಸುವಂತೆ ಕೊಟ್ಟ ಎಲ್ಲಾ ಜ್ಞಾನವುಳ್ಳ ಸಮಾಲೋಚನೆಗಳನ್ನು ಇದು ಸೂಚಿಸುತ್ತದೆ. ಕೀರ್ತನೆಗಾರನು ಧರ್ಮಶಾಸ್ತ್ರವನ್ನು ಕುರಿತು "ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವವನೋ ಅವನು ಎಷ್ಟೋ ಧನ್ಯನು" ಎಂದು ಹೇಳಿರುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ (ಕೀರ್ತನೆಗಳು 1:2).

ಮೋಶೆಯು ಬರೆದ ಗ್ರಂಥಗಳಲ್ಲಿ ದಾಖಲೆಯಾಗಿರುವ ಸೂಚನೆಗಳು ಮತ್ತು ಬೋಧನೆಗಳನ್ನು ಒಳಗೊಂಡಿರುವ ಧರ್ಮಶಾಸ್ತ್ರ ಅಥವಾ 'ತೋರ'ವನ್ನು ಓದತೊಡಗುತ್ತಿದ್ದಂತೆಯೇ ಅದರಲ್ಲಿರುವ ವಿಸ್ತಾರವಾದ ಶ್ರೇಣಿಯುಳ್ಳ ಸೂಚನೆಗಳು ನಮ್ಮನ್ನು ಪ್ರಭಾವಪಡಿಸುತ್ತವೆ. ಧರ್ಮಶಾಸ್ತ್ರವು ಇಸ್ರಾಯೆಲ್ಯರ ಕೃಷಿ, ಪೌರಾಡಳಿತ, ಸಾಮಾಜಿಕ ಸಂಬಂಧಗಳು ಮತ್ತು ದೈವಾರಾಧನೆ ಮುಂತಾದ ಅವರ ಜೀವನಶೈಲಿಯ ಪ್ರತಿಯೊಂದು ಭಾಗದ ಮೇಲೂ ತನ್ನ ಸ್ಪರ್ಶವನ್ನು ಮಾಡಿದೆ.

ಇಸ್ರಾಯೇಲ್ಯರಿಗೆ ದೇವರು ಯಾಕೆ ಅಷ್ಟು ಸಲಹಾ ಸೂಚನೆಗಳನ್ನು ನೀಡಿದ್ದಾನೆಂದು ನೀವು ಭಾವಿಸುವಿರಿ? (ಧ.ಕಾಂಡ 10:13ನ್ನು ನೋಡಿರಿ). ಯಾವ ರೀತಿಯಲ್ಲಿ ಈ ಎಲ್ಲಾ ಸಲಹಾ ಸೂಚನೆಗಳು ಅವರ ಒಳ್ಳೆಯದಕ್ಕೆ ಕೊಡಲ್ಪಟ್ಟವು?

ಒಡಂಬಡಿಕೆಯ ವ್ಯಾಪ್ತಿಯಲ್ಲಿ ಧರ್ಮಶಾಸ್ತ್ರವು ಒಡಂಬಡಿಕೆಯ ಮನುಷ್ಯ ಪಾಲುದಾರನ ಹೊಸಜೀವನಕ್ಕೆ ಮಾರ್ಗಸೂಚಿಗಳನ್ನು ಒದಗಿಸಿಕೊಡುವುದೇ ಧರ್ಮಶಾಸ್ತ್ರದ ಕೆಲಸವಾಗಿತ್ತು. ಧರ್ಮಶಾಸ್ತ್ರವು ಒಡಂಬಡಿಕೆಯ ಸದಸ್ಯನನ್ನು ದೇವಚಿತ್ತಕ್ಕೆ ಪರಿಚಯಿಸುತ್ತದೆ. ಒಬ್ಬನು ಆತನನ್ನು ನಂಬಿಕೆಯಿಂದ ಆತನ ಆಜ್ಞೆಗಳಿಗೆ ಮತ್ತು ವ್ಯಕ್ತವಾಗಿರುವ ಚಿತ್ತಕ್ಕೆ ವಿಧೇಯತೆ ಮೂಲಕ ಪೂರ್ಣವಾದ ರೀತಿಯಲ್ಲಿ ತಿಳಿಸಿಕೊಡುತ್ತದೆ.

ಒಡಂಬಡಿಕೆಯ ಸಂಬಂಧದ ಜೀವಂತ ವಾಸ್ತವದ ವ್ಯಾಪ್ತಿಯೊಳಗೆ ಧರ್ಮಶಾಸ್ತ್ರವಾಡುವ ಪಾತ್ರವು ಇಸ್ರಾಯೇಲ್ಯರು ಇತರೆ ಜನಾಂಗದ ರೀತಿ ನೀತಿಗಳನ್ನು ಅನುಸರಿಸುವಂತಿರಲಿಲ್ಲವೆಂಬುದನ್ನು ತೋರಿಸಿಕೊಡುತ್ತದೆ. ಅವರು ಪ್ರಾಕೃತಿಕವಾದ, ಮಾನವ ಅಗತ್ಯತೆಗಳ, ಬಯಕೆಗಳ ಅಥವಾ ಸಾಮಾಜಿಕ,

ರಾಜಕೀಯ ಮತ್ತು ಆರ್ಥಿಕ ಅಗತ್ಯತೆಗಳ ನಿಯಮಾನುಸಾರ ಜೀವಿಸುವಂತಿರಲಿಲ್ಲ. ಅವರು ದೇವರ ಪರಿಶುದ್ಧ ಜನಾಂಗವಾಗಿ ಯಾಜಕರಾಜ್ಯವಾಗಿ ಮತ್ತು ವಿಶೇಷವಾದ ಸ್ವಕೀಯ ಜನರಾಗಿ ಒಡಂಬಡಿಕೆಯನ್ನು ಮಾಡಿಕೊಳ್ಳುವ ದೇವರ ಚಿತ್ತಕ್ಕೆ ರಾಜಿಯಾಗದ ವಿಧೇಯತೆಯ ಮೂಲಕ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಮುಂದುವರೆದುಕೊಂಡು ಹೋಗಬಹುದಾಗಿತ್ತು.

ಇಸ್ರಾಯೇಲ್ಯರಂತೆಯೇ ಸೆವೆಂತ್ ಡೇ ಅಡ್ವೆಂಟಿಸ್ಟರೂ ಸಹಾ ಪ್ರವಾದನೆಯ ವರದ ಮೂಲಕ ಕ್ರೈಸ್ತೀಯ ಜೀವಿತದ ಪ್ರತಿಯೊಂದು ಹಂತಕ್ಕೆ ಸಂಬಂಧಪಟ್ಟ ವಿಸ್ತಾರವಾದ ವ್ಯಾಪ್ತಿಯುಳ್ಳ ಸಮಾಲೋಚನೆಗಳನ್ನು ಹೊಂದಿಕೊಂಡಿದ್ದಾರೆ. ನಾವು ಈ ಸಮಾಲೋಚನೆಗಳನ್ನು ನಮ್ಮ ಸ್ವಂತ ಆಲೋಚನೆಗೆ ಮತ್ತು ಕ್ರಿಯೆಗಳಿಗೆ ಭಂಗತರುವಂಥವುಗಳು ಎಂದೆಣಿಸದೆ ದೇವರಿಂದ ಬರುವ ವರವೆಂದು ಯಾಕೆ ಎಣಿಸಬೇಕು?

ಯಾವ ರೀತಿಯಲ್ಲಿ ಇಸ್ರಾಯೇಲ್ಯರು ಅವರಿಗೆ ಕೊಟ್ಟ ವರಗಳನ್ನು ತಿಳಿದುಕೊಂಡರೋ ಅದೇ ರೀತಿಯಲ್ಲಿ ನಮಗೆ ಕೊಟ್ಟಿರುವ ವರಗಳನ್ನು ನ್ಯಾಯಸಮ್ಮತವಾದ ಹಕ್ಕು ಎಂದು ತಿಳಿದುಕೊಳ್ಳುವುದರಿಂದ ನಾವು ಯಾವ ಅಪಾಯವನ್ನು ಎದುರಿಸಬೇಕಾಗುತ್ತದೆ? (ರೋಮನ್ಸ್ 9:32ನ್ನು ನೋಡಿರಿ).

**ಬುಧವಾರ** **ಮೇ 19**

## ದೇವರ ನ್ಯಾಯಪ್ರಮಾಣದ ಸ್ಥಿರತೆ

ಒಡಂಬಡಿಕೆಯ ಸಂಬಂಧದೊಳಗೆ ಬರುವ ದೇವರ ಧರ್ಮಶಾಸ್ತ್ರವು ಅವನ ಅಗತ್ಯವಾದ ಸ್ವಭಾವದ (ಪ್ರಕೃತಿ) ಬಗ್ಗೆ ಯಾವ ಸತ್ಯವನ್ನು ಹೊಂದಿದೆ? (ಮಲಾಕೀಯ 3:6 ಮತ್ತು ಯಾಕೋಬ 1:17ನ್ನು ನೋಡಿರಿ)

ದೇವರ ಧರ್ಮಪ್ರಮಾಣವು ಮೌಖಿಕ ಅಥವಾ ಲಿಖಿತರೂಪದಲ್ಲಿ ವ್ಯಕ್ತವಾಗಿರುವ ದೇವರ ಚಿತ್ತವಾಗಿದೆ (ಕೀರ್ತ 40:8ನ್ನು ನೋಡಿರಿ). ಯಾಕೆಂದರೆ ಧರ್ಮಪ್ರಮಾಣವು ದೇವರ ಗುಣಸ್ವಭಾವದ ಪ್ರತಿಲಿಪಿಯಾಗಿದೆ. ಒಡಂಬಡಿಕೆಯಲ್ಲಿ ಅದರ ಇರುವಿಕೆಯು ನಮಗೆ ದೇವರ ಶಾಶ್ವತತೆ ಮತ್ತು ವಿಶ್ವಾಸಾರ್ಹತೆಯ ಬಗ್ಗೆ ಆಶ್ವಾಸನೆಯನ್ನು ನೀಡುತ್ತದೆ. ಆತನ ದೈವತ್ವವು ಹೇಗೆ ಕಾರ್ಯನಿರ್ವಹಿಸುತ್ತದೆ

ಎಂಬುದು ನಮಗೆ ತಿಳಿಯಲಾರದೆ ಹೋದಾಗ್ಯೂ ಆತನು ನಂಬಿಗಸ್ತನು ಎಂಬುದು ನಮಗೆ ಗೊತ್ತಿದೆ. ಆತನ ವಿಶ್ವವು ವ್ಯತ್ಯಾಸವಾಗದ (ಮಾರ್ಪಾಟಾಗದ) ನೈತಿಕ ಮತ್ತು ಭೌತಿಕ ನಿಯಮಗಳಡಿಯಲ್ಲಿದೆ. ನಮಗೆ ನಿಜವಾದ ಸ್ವಾತಂತ್ರ್ಯವನ್ನು ಭದ್ರತೆಯನ್ನು ಕೊಡುವ ಸತ್ಯವಾದ ಸಂಗತಿಯು ಇದೇ ಆಗಿದೆ.

"ದೇವರು ನಂಬಲರ್ಹನು ಮತ್ತು ನೆಚ್ಚಿಕೊಳ್ಳಬಹುದಾದವನು ಎಂಬ ಆಶ್ವಾಸನೆಯು ಆತನು ನ್ಯಾಯಪ್ರಮಾಣದ ದೇವರಾಗಿದ್ದಾನೆ ಎಂಬ ಸತ್ಯದಲ್ಲಿ ಅಡಕವಾಗಿದೆ. ಆತನ ಚಿತ್ತ ಮತ್ತು ನ್ಯಾಯಪ್ರಮಾಣ ಒಂದೇ ಆಗಿವೆ. ಸರಿಯಾದುದು ಯಾವಾಗಲೂ ಸರಿಯಾಗಿರುತ್ತದೆ. ಯಾಕೆಂದರೆ ಅತ್ಯುತ್ತಮ ಸಾಧ್ಯತೆಯು ಸಂಬಂಧವನ್ನು ವಿವರಿಸುತ್ತದೆ. ಆದುದರಿಂದ ದೇವರ ನ್ಯಾಯಪ್ರಮಾಣವು ಎಂದಿಗೂ ಸ್ವೇಚ್ಚಾಚಾರವೂ ಅಲ್ಲ ಅಥವಾ ಐಲಾಟವೂ ಅಲ್ಲ. ದೇವರ ನ್ಯಾಯಪ್ರಮಾಣವು ಈ ವಿಶ್ವದಲ್ಲಿಯೇ ಅತ್ಯಂತ ಸ್ಥಿರವಾದ ಸತ್ಯವಾಗಿದೆ"– ವಾಲ್ಟರ್ ಆರ್. ಬೀಚ್‌ರವರ ರಕ್ಷಣೆಯ ಆಯಾಮಗಳು ಪುಸ್ತಕದಲ್ಲಿ 143ನೇ ಪುಟ.

ದೇವರ ನ್ಯಾಯಪ್ರಮಾಣವು ಒಬ್ಬ ವ್ಯಕ್ತಿಯನ್ನು ಪಾಪದಿಂದ ರಕ್ಷಿಸಲಾರದ ಪಕ್ಷದಲ್ಲಿ ಅದನ್ನು ಒಡಂಬಡಿಕೆಯ ಒಂದು ಭಾಗವಾಗಿ ಮಾಡಲ್ಪಟ್ಟಿದೆ ಏಕೆ?

(ಸುಳುಹು : ಆಮೋಸ 3:3ನ್ನು ನೋಡಿರಿ).

ಒಂದು ಸಂಬಂಧವು ಒಂದು ಒಪ್ಪಂದವನ್ನೂ ಸಾಮರಸ್ಯವನ್ನೂ ಕೇಳುತ್ತದೆ. ದೇವರು ಕೇವಲ ಈ ಲೋಕದ ಸೃಷ್ಟಿಕರ್ತನು ಮಾತ್ರವಲ್ಲ. ಆತನು ಇದರ ನೈತಿಕ ಆಡಳಿತಗಾರನು (ನಿಯಂತ್ರಕನು) ಆಗಿರುವುದರಿಂದ ಆತನು ಸೃಷ್ಟಿಸಿದ ಬೌದ್ಧಿಕ ಜೀವಿಗಳ ಸಂತೋಷಕ್ಕೆ ಮತ್ತು ಆತನೊಂದಿಗಿನ ಸಾಮರಸ್ಯಕ್ಕೆ ನ್ಯಾಯಪ್ರಮಾಣವು ಅತ್ಯಗತ್ಯವಾಗಿದೆ. ಆತನ ನ್ಯಾಯಪ್ರಮಾಣವು ಆತನ ಚಿತ್ತವನ್ನು ವ್ಯಕ್ತಪಡಿಸುತ್ತದೆ. ಆತನ ಸರ್ಕಾರದ ಸಂವಿಧಾನವಾಗಿದೆ. ನ್ಯಾಯಪ್ರಮಾಣವು ಸಹಜವಾಗಿ ಮಾದರಿಯ ಮಟ್ಟವಾಗಿದೆ ಅಥವಾ ಒಡಂಬಡಿಕೆಯ ಏರ್ಪಾಟಿಗೆ ಮತ್ತು ಸಂಬಂಧದ ಕರ್ತವ್ಯವಾಗಿದೆ. ಇದರ ಉದ್ದೇಶವು ನಮ್ಮನ್ನು ರಕ್ಷಿಸುವುದಕ್ಕಲ್ಲ. ಆದರೆ ದೇವರಿಗೆ ನಾವು ನಿರ್ವಹಿಸಬೇಕಾದ ಕರ್ತವ್ಯಪಾಲನೆಯನ್ನು ಇದು

ವಿವರಿಸುತ್ತದೆ (1 ರಿಂದ 4ನೇ ಆಜ್ಞೆಗಳು) ಮತ್ತು ನಮ್ಮ ಸಹಜೀವಿಗಳಿಗೆ ನಮ್ಮ ಕರ್ತವ್ಯವನ್ನು ವಿವರಿಸುತ್ತದೆ (5 ರಿಂದ 10ನೇ ಆಜ್ಞೆಗಳು). ಇನ್ನೊಂದು ರೀತಿಯಾಗಿ ಹೇಳುವುದಾದರೆ, ದೇವರು ತನ್ನ ಒಡಂಬಡಿಕೆಯ ಮಕ್ಕಳು ಸಂತೋಷವಾಗಿ ಸಮೃದ್ಧಿಯಾಗಿ ಜೀವಿಸುವುದಕ್ಕೆ ಬೇಕಾದ ಜೀವನಶೈಲಿಯನ್ನು ಇದು ಮಂಡಿಸುತ್ತದೆ. ಒಬ್ಬ ವಿಶ್ವಾಸಿಯನ್ನು ದೇವರ ಪರಿವರ್ತನಾ ಕೃಪೆಯ ಮೂಲಕ ಆತನ ಸ್ವಭಾವಕ್ಕೂ ಚಿತ್ತಕ್ಕೂ ಸಾಮರಸ್ಯವನ್ನು ತರುವ ಉದ್ದೇಶವು ಒಡಂಬಡಿಕೆಯದಾಗಿತ್ತು ಮತ್ತು ಈಗಲೂ ಅದೇ ಉದ್ದೇಶವಾಗಿದೆ.

**ಗುರುವಾರ** **ಮೇ 20**

## ಆದರೆ ............

ಈ ಕೆಳಗೆ ಕೊಟ್ಟಿರುವ ವಚನಗಳನ್ನು ಗಮನಿಸಿರಿ. ಯಾವ ಒಂದು ವಿಷಯದಲ್ಲಿ ಇವು ಸಾಮಾನ್ಯವಾಗಿವೆ ಮತ್ತು ಒಡಂಬಡಿಕೆಯ ಸ್ವಭಾವದ ಬಗ್ಗೆ ಇವು ನಮಗೆ ಏನನ್ನು ಬೋಧಿಸುತ್ತವೆ?

ಆ.ಕಾಂಡ 18:19 ______________________________

ಆ.ಕಾಂಡ 26:4,5 ______________________________

ಯಾ.ಕಾಂಡ 26:3 ______________________________

ಅಬ್ರಹಾಮನು ತನ್ನ ಆಜ್ಞಾ ನೇಮವಿಧಿಗಳನ್ನು ಕೈಗೊಂಡು ನಡೆದನು ಎಂಬುದಾಗಿ ದೇವರು ಮುಕ್ತವಾಗಿ ಅಬ್ರಹಾಮನ ಪ್ರಾಮಾಣಿಕವಾದ ವಿಧೇಯತೆಯನ್ನು ದೃಢೀಕರಿಸಿದ್ದಾನೆ (ಆ.ಕಾಂಡ 26:5). ದೇವರು ಒಡಂಬಡಿಕೆಯ ಪಾಲುದಾರನಾದ ಮನುಷ್ಯನಿಂದ ಇಂತಹ ಜೀವನಶೈಲಿಯನ್ನೇ ನಿರೀಕ್ಷಿಸುತ್ತಾನೆಂದು ಮೇಲಿನ ಉದಾಹರಣೆಯು ನಮಗೆ ಸೂಚಿಸುತ್ತದೆ. ಸತ್ಯವೇದದಲ್ಲಿರುವ ಸಿನಾಯಿ ಬೆಟ್ಟದ ಒಡಂಬಡಿಕೆಗೆ ವಿಧೇಯರಾಗಬೇಕೆಂಬ ನಿಬಂಧನೆಗಳು ಮುಖ್ಯವಾದ ಮೂಲಾಂಶಗಳಲ್ಲಿ ಒಂದಾಗಿದೆ ಎಂಬುದನ್ನು ಸಾಕಷ್ಟು ಸ್ಪಷ್ಟಪಡಿಸುತ್ತದೆ.

ವಿ.ಕಾಂಡ 19:5 ಇದನ್ನು ವಿಶದವಾಗಿ ಹೇಳುತ್ತದೆ : ನೀವು ನನ್ನ ಮಾತನ್ನು, ನಾನು ಮಾಡುವ ನಿಬಂಧನೆಯನ್ನು ಅನುಸರಿಸಿ ನಡೆದರೆ ಎಂಬ ಷರತ್ತು

ಪೂರ್ವಕವಾದ ಒಡಂಬಡಿಕೆಯನ್ನು ಅಲ್ಲಗಳೆಯಲಾಗದು; ಇದು ಕೃಪೆಯ ಅನುಗ್ರಹವಾದರೂ ಸಂಪಾದನೆ ಮಾಡಲಾಗದಿದ್ದರೂ, ಇದು ಉಚಿತಾರ್ಥವಾದ ವರವಾಗಿದ್ದರೂ ಒಡಂಬಡಿಕೆಯ ವಾಗ್ದಾನಗಳು ಷರತ್ತು ರಹಿತವಾದವುಗಳಲ್ಲ (ನಿಬಂಧನೆಗಳಿಲ್ಲದವುಗಳಲ್ಲ). ಜನರು ವರವನ್ನು ತಿರಸ್ಕರಿಸಬಹುದು, ಕೃಪೆಯನ್ನು ನಿರಾಕರಿಸಲೂ ಬಹುದು ಮತ್ತು ಒಡಂಬಡಿಕೆಯ ವಾಗ್ದಾನಗಳನ್ನು ಬೇಡವೆಂದು ಹೇಳಲೂಬಹುದು ರಕ್ಷಣೆಯ ವಿಷಯದಲ್ಲಿ ಒಡಂಬಡಿಕೆಯು ಎಂದಿಗೂ ಆಯ್ಕೆಯ ಸ್ವಾತಂತ್ರ್ಯವನ್ನು ಅಲ್ಲಗಳೆಯುವುದಿಲ್ಲ. ದೇವರು ಜನರನ್ನು ಎಂದಿಗೂ ತನ್ನ ರಕ್ಷಣೆಗೆ ಬರಬೇಕೆಂದು ಬಲವಂತಪಡಿಸುವುದಿಲ್ಲ, ಆತನು ತನ್ನ ಒಡಂಬಡಿಕೆಯನ್ನು ಅವರ ಮೇಲೆ ಹೇರುವುದಿಲ್ಲ, ಆತನ ಎಲ್ಲರಿಗೂ ಅದನ್ನು ಉಚಿತವಾಗಿ ದಯಪಾಲಿಸುತ್ತಾನೆ. ಅದನ್ನು ಒಪ್ಪಿಕೊಳ್ಳುವುದಕ್ಕೆ ಪ್ರತಿಯೊಬ್ಬರನ್ನು ಆಹ್ವಾನಿಸುತ್ತಾನೆ. ಒಬ್ಬ ವ್ಯಕ್ತಿಯು ಆಹ್ವಾನವನ್ನು ಒಪ್ಪಿಕೊಂಡಾಗ ಕರ್ತವ್ಯಗಳನ್ನು ಪಾಲಿಸ-ಬೇಕಾಗುತ್ತದೆ. ಹಾಗೆ ಪಾಲಿಸಬೇಕಾಗಿರುವುದು ಒಡಂಬಡಿಕೆಯ ಆಶೀರ್ವಾದಗಳನ್ನು ಹೊಂದಿಕೊಂಡಿರುವುದಕ್ಕೆ ಬಹಿರಂಗವಾದ ತೋರಿಕೆಯಾಗಿದೆ.

ಇಸ್ರಾಯೇಲ್ಯರು ವಾಗ್ದಾನಗಳನ್ನು ಸಂಪಾದಿಸುವ ಸಲುವಾಗಿ ಅವುಗಳಿಗೆ ವಿಧೇಯರಾಗಬೇಕಾಗಿರಲಿಲ್ಲ, ಆದರೆ ವಾಗ್ದಾನಗಳು ನೆರವೇರುವುದಕ್ಕಾಗಿ ಅವರು ವಿಧೇಯರಾಗಬೇಕಾಗಿತ್ತು. ದೇವರಿಂದ ಆಶೀರ್ವಾದಗಳನ್ನು ಹೊಂದಿಕೊಳ್ಳುವುದು ಎಂದರೆ ಏನು ಎಂಬುದನ್ನು ವ್ಯಕ್ತಪಡಿಸುವುದಕ್ಕಾಗಿ ವಿಧೇಯರಾಗಬೇಕಿತ್ತು. ವಿಧೇಯತ್ವವು ಆಶೀರ್ವಾದಗಳನ್ನು ಸಂಪಾದಿಸುವುದಿಲ್ಲ. ಅವರ ವಿಧೇಯತ್ವವು ದೇವರು ಆಶೀರ್ವದಿಸಲೇಬೇಕಾದ ಹಂಗನ್ನುಂಟು ಮಾಡಲಾರವು. ಇದಕ್ಕೆ ಪ್ರತಿಯಾಗಿ ವಿಧೇಯತ್ವವು ನಂಬಿಕೆಯಿಂದ ಸಿಗುವ ಆಶೀರ್ವಾದಗಳನ್ನು ವ್ಯಕ್ತಪಡಿಸುವಂತಹ ಪರಿಸರವನ್ನು ಸೃಷ್ಟಿಸುತ್ತದೆ.

ನೀವು ಸ್ವತಂತ್ರಿಸಿಕೊಳ್ಳುವ ದೇಶದಲ್ಲಿ ಬಹುಕಾಲ ಶುಭವುಳ್ಳವರಾಗಿ ಬದುಕಿಕೊಳ್ಳುವಂತೆ ನಿಮ್ಮ ದೇವರಾದ ಯೆಹೋವನು ಆಜ್ಞಾಪಿಸಿದ ಮಾರ್ಗದಲ್ಲೇ ನಡೆಯಬೇಕು (ಧ.ಕಾಂಡ 5:33). ಇಲ್ಲಿ ದೇವರು ಇಸ್ರಾಯೇಲ್ಯರಿಗೆ ನೀವು

ವಿಧೇಯರಾದರೆ ನೀವು ಆಶೀರ್ವಾದಗಳನ್ನು ಸಂಪಾದಿಸಿಕೊಳ್ಳುವಿರಿ ಎಂದು ಹೇಳುತ್ತಿದ್ದಾನೆಯೆ? ಈ ಆಶೀರ್ವಾದಗಳನ್ನು ದೇವರು ಜನರಿಗೆ ಸಲ್ಲಿಸಲೇ ಬೇಕಾಗಿದ್ದವೆ? ಅಥವಾ ಆತನು ನೀವು ವಿಧೇಯರಾದರೆ ನಿಮ್ಮ ವಿಧೇಯತ್ವವು ನನಗೆ ನಿಮ್ಮನ್ನು ಆಶೀರ್ವದಿಸುವುದಕ್ಕೆ ಅನುವು ಮಾಡಿಕೊಡುತ್ತದೆ ಎಂದು ಹೇಳಿದನೆ? ಇವೆರಡು ಆಲೋಚನೆಗಳ ನಡುವೆ ಏನು ವ್ಯತ್ಯಾಸವಿದೆ?

**ಶುಕ್ರವಾರ** **ಮೇ 21**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟಮ್ಮನವರು ಬರೆದ ಯುಗಗಳ ಬಯಕೆ– ಡಿಸೈರ್ ಆಫ್ ಏಜಸ್ ಪುಸ್ತಕದಲ್ಲಿ 'ವಿರಸ' ಎಂಬ ಅಧ್ಯಾಯ ಪುಟ 607, 608 ಮತ್ತು 'ನಮ್ಮ ಪಿತೃಗಳು ಮತ್ತು ಪ್ರವಾದಿಗಳು' ಪುಸ್ತಕದಲ್ಲಿ 'ನ್ಯಾಯ ಪ್ರಮಾಣ ಮತ್ತು ಒಡಂಬಡಿಕೆ' ಅಧ್ಯಾಯದಲ್ಲಿ ಪುಟ 363–373.

ಮತ್ತಾಯ 22:34–40 ವಚನಗಳು ನಮಗೆ ಹೇಗೆ ಈ ಎರಡು ವಿಷಯಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ 1) ದೇವರ ಒಡಂಬಡಿಕೆಗೆ ಒಳಪಟ್ಟ ದೇವರ ಧರ್ಮಪ್ರಮಾಣದ ಸ್ಥಳ ಮತ್ತು ಅದರ ಅರ್ಥ. (2) ಒಡಂಬಡಿಕೆಯು ಸಂಬಂಧಕ್ಕೆ ಸಮಾನಾರ್ಥವಾಗಿರುವ ಪರಿಕಲ್ಪನೆ?

"ಒಬ್ಬ ಮನುಷ್ಯನ ಹೃದಯದಲ್ಲಿ ಯೇಸುಕ್ರಿಸ್ತನ ಕೃಪೆ ಮತ್ತು ಬಲದಿಂದ ದೇವರ ಧರ್ಮಶಾಸ್ತ್ರದ ನಿಬಂಧನೆಗಳನ್ನು ಕೈಗೊಳ್ಳುವ ಮೊದಲು ಪ್ರೀತಿ ಇರಬೇಕು (ರೋಮನ್ಸ್ 8:3,4) ಪ್ರೀತಿರಹಿತವಾದ ವಿಧೇಯತೆಯು ಅಸಾಧ್ಯವಾದಂತೆಯೇ ಅಯೋಗ್ಯವಾದದೂ ಆಗಿದೆ. ಆದರೆ ಎಲ್ಲಿ ಪ್ರೀತಿ ಇದೆಯೋ ಅಲ್ಲಿ ವ್ಯಕ್ತಿಯು ದೇವರ ಆಜ್ಞೆಗಳಲ್ಲಿ ವ್ಯಕ್ತವಾಗಿರುವಂತೆ ತನ್ನಷ್ಟಕ್ಕೆ ತಾನೇ ದೇವರ ಚಿತ್ತದ ಜೊತೆಗೆ ತನ್ನ ಜೀವಿತವನ್ನು ಕ್ರಮಪಡಿಸಿಕೊಂಡು ಸಾಮರಸ್ಯದಲ್ಲಿರುತ್ತಾನೆ". ಎಸ್.ಡಿ.ಎ. ಸತ್ಯವೇದ ವ್ಯಾಖ್ಯಾನ 5ನೇ ಸಂಪುಟದಲ್ಲಿ 484ನೇ ಪುಟ.

ದೇವರ ಪರಿಶುದ್ಧವಾದ ಧರ್ಮಶಾಸ್ತ್ರದ ನೇಮಗಳಲ್ಲಿ ದೇವರು ಜೀವನದ ಪರಿಪೂರ್ಣವಾದ ನಿಯಮಗಳನ್ನು ಕೊಟ್ಟಿದ್ದಾನೆ; ಕಾಲವು ಕೊನೆಯಾಗುವವರೆಗೂ ಒಂದು ಸೊನ್ನೆ ಗುಡುಸಾದರು ಅಳಿಸಿಹೋಗದೆ ಈ ಧರ್ಮಶಾಸ್ತ್ರವು ಬದಲಾಗದೆ ಮಾನವರ ಮೇಲೆ ತನ್ನ ಹಕ್ಕನ್ನು ಸಾಧಿಸುತ್ತಿರುತ್ತದೆ. ಯೇಸುಕ್ರಿಸ್ತನು

ಧರ್ಮಶಾಸ್ತ್ರವನ್ನು ಉನ್ನತೀಕರಿಸಿ ಅದನ್ನು ಹೆಚ್ಚು ಗೌರವಯುತವನ್ನಾಗಿ ಮಾಡಿದನು. ಇದು ದೇವರ ಮೇಲೆ ಮತ್ತು ಮನುಷ್ಯನ ಮೇಲೆ ತೋರುವ ವಿಸ್ತಾರವಾದ ಪ್ರೀತಿಯ ತಳಹದಿಯ ಮೇಲೆ ನೀತಿಗೆ ಮತ್ತು ಅದರ ನಿಬಂಧನೆಗಳಿಗೆ ತೋರುವ ವಿಧೇಯತೆಯು ಮನುಷ್ಯನ ಪೂರ್ಣವಾದ ಕರ್ತವ್ಯವನ್ನು ಒಳಗೊಂಡಿದೆ ಎಂದು ಯೇಸುಕ್ರಿಸ್ತನು ನಮಗೆ ತನ್ನ ಜೀವಿತದಲ್ಲಿ ತೋರಿಸಿದನು. ಆತನು ತನ್ನ ಸ್ವಂತ ಜೀವಿತದಲ್ಲಿ ದೇವರ ಧರ್ಮಶಾಸ್ತ್ರಕ್ಕೆ ತೋರುವ ವಿಧೇಯತೆಗೆ ಉದಾಹರಣೆಯಾಗಿದ್ದನು. ಆತನು ತನ್ನ ಪರ್ವತ ಪ್ರಸಂಗದಲ್ಲಿ ಧರ್ಮಶಾಸ್ತ್ರದ ಅಗತ್ಯತೆಗಳು ಹೊರನೋಟಕ್ಕೆ ಕಾಣುವ ಕ್ರಿಯೆಗಳನ್ನು ಮೀರಿದವುಗಳಾಗಿದೆ ಎಂದು ಅದು ನಮ್ಮ ಆಲೋಚನೆಗಳ ಒಳನೋಟ ಹೃದಯದ ಉದ್ದೇಶವನ್ನು ನೋಡುತ್ತದೆಯೆಂದು ನಮಗೆ ತೋರಿಸಿಕೊಟ್ಟನು"– ಎಲೆನ್ ವೈಟಮ್ಮನವರ ಅಪೋಸ್ತಲರ ಕೃತ್ಯಗಳು ಪುಟ 505.

## ಆರೋಗ್ಯದ ಲೇಖನಮಾಲೆ

### ಎಂಟನೇ ವಾರ

*** ಜಂತುಹುಳುಗಳು**

**ಜಂತು ಹುಳುಗಳೆಂದರೇನು?**

ಇವು ಮನುಷ್ಯರ ಜಠರದಲ್ಲಿ ವಾಸಿಸುವ ಪರಾವಲಂಬಿ ಜೀವಿಗಳು. ಅಂದರೆ ಇವು ಕರುಳುಗಳು ಮತ್ತು ಸ್ನಾಯುಗಳನ್ನು ತಿಂದು ಜೀವಿಸುತ್ತವೆ. ಮಾನವನ ಕರುಳಿನಲ್ಲಿ ಕೊನೇಪಕ್ಷ ಆರು ವಿಧವಾದ ಜಂತುಹುಳುಗಳಿರುತ್ತವೆ. ನಾವು ಊಟ ಮಾಡಿದಾಗ ದೇಹದೊಳಕ್ಕೆ ಹೋಗುವ ಅಂಡಗಳಿಂದ ಹುಳುಗಳು ಬೆಳೆಯುತ್ತವೆ. ಕೆಲವು ಚಿಕ್ಕದಾಗಿಯೂ ಮತ್ತೆ ಕೆಲವು ಸಾಕಷ್ಟು ದೊಡ್ಡದಾಗಿಯೂ ಇರುತ್ತವೆ.

**ಜಂತುಹುಳುಗಳಿನ ಬಾಧೆ ಕಂಡು ಹಿಡಿಯುವುದು ಹೇಗೆ?**

1. ಹೊಟ್ಟೆ ಉರಿಕೊಂಡಿರುವುದು ಮತ್ತು ಒಣಕೆಮ್ಮು (ಜಂತುಹುಳು)
2. ತೂಕ ಕಡಿಮೆಯಾಗುವುದು (ಜಂತುಹುಳು ಮತ್ತು ಲಾಡಿ ಹುಳು)
3. ಅತಿಭೇದಿ

4. ರಕ್ತಹೀನತೆ ಮತ್ತು ಮಗು ಮಣ್ಣು ತಿನ್ನುವಾಗ (ಕೊಕ್ಕೆಹುಳು)
5. ಗುದದ್ವಾರದ ಬಳಿ ನವೆ (ಸೂಜಿ ಹುಳು)
6. ಸ್ನಾಯು ನೋವು (ಕೂದಲು ಹುಳು)

**ಕಾರಣವೇನು?**

ಮಲವಿಸರ್ಜನೆಯ ನಂತರ ಕೈಗಳನ್ನು ಸೋಪಿನಿಂದ ಶುಚಿಯಾಗಿ ತೊಳೆದು ಕೊಳ್ಳದಿದ್ದಾಗ, ಮಲದಲ್ಲಿರುವ ಅಂಡಗಳು ಆ ವ್ಯಕ್ತಿಯು ಮುಟ್ಟಿದ ತಟ್ಟೆ, ಚಮಚ ಬಟ್ಟಲುಗಳ ಮೂಲಕ ಇತರರಿಗೆ ಸೇರುತ್ತದೆ. ದನ, ಹಂದಿ ಮಾಂಸ ಹಾಗೂ ಸರಿಯಾಗಿ ಬೇಯಿಸದ ಮಾಂಸವನ್ನು ತಿನ್ನುವವರಲ್ಲಿ ಲಾಡಿಹುಳು ಮತ್ತು ಕೂದಲು ಹುಳು ಕಂಡುಬರುತ್ತವೆ.

**ಏನು ಮಾಡಬೇಕು?**

1. ಯಾವ ರೀತಿಯ ಪರೋಪ ಜೀವಿಯು ಕರುಳಿನಲ್ಲಿದೆ ಎಂಬುದನ್ನು ತಿಳಿಯಲು ವೈದ್ಯರನ್ನು ಕಾಣಬೇಕು.
2. ಪೋಷಕಾಂಶಭರಿತ ಸಸ್ಯಹಾರ ಮಾತ್ರ ಸೇವಿಸಿ.
3. ಚಿಕಿತ್ಸೆಯನ್ನು ಬಿಡದೆ ತೆಗೆದುಕೊಳ್ಳಬೇಕು. ಮಕ್ಕಳನ್ನು ಭಯಪಡಿಸದೆ ಅವರು ಔಷಧ ತೆಗೆದುಕೊಳ್ಳುವಂತೆ ಮಾಡಬೇಕು. ದೇವರಲ್ಲಿ ಪ್ರಾರ್ಥಿಸಿ.

## * ಅಮೀಬಿಯಾ ರಕ್ತಭೇದಿ

**ರಕ್ತಭೇದಿ ಅಥವಾ ಆಮಶಂಕೆ ಎಂದರೇನು?**

ಕರುಳಿನ ಒಳಚರ್ಮ ಹಾಗೂ ಗ್ರಂಥಿಗಳು ಊತಗೊಂಡು, ಹೊಟ್ಟೆ ನುಲಿತ ಉಂಟಾಗಿ ಭೇದಿಯಲ್ಲಿ ಆಮ–ರಕ್ತಗಳು ಹೋಗುವ ಒಂದು ರೋಗ.

**ಕಂಡು ಹಿಡಿಯುವುದು ಹೇಗೆ?**

1. ಆಮಶಂಕೆ ಬರುತ್ತದೆ ಮತ್ತು ಹೋಗುತ್ತದೆ. ಕೆಲವು ಸಾರಿ ಮಲಬದ್ಧತೆ ಉಂಟಾಗುತ್ತದೆ.
2. ಹೊಟ್ಟೆನುಲಿತ, ಮಲವು ತೆಳುವಾಗಿ ಲೋಳೆ ಮತ್ತು ರಕ್ತದೊಂದಿಗೆ ಹೋಗುವುದು.

3. ಜ್ವರ ಇರುವುದಿಲ್ಲ.

**ಕಾರಣವೇನು?**

1. ಅಶುದ್ಧ ನೀರು, ಕಾಯಿಸದ ಹಾಲು
2. ಮಾನವನ ಮಲದಿಂದ ಕಲುಷಿತಗೊಂಡ ತರಕಾರಿಗಳನ್ನು ಹಸಿಯಾಗಿ, ತೊಳೆಯದೆ ತಿನ್ನುವುದು.

**ಏನು ಮಾಡಬೇಕು?**

1. ವೈದ್ಯರನ್ನು ಭೇಟಿ ಮಾಡಿ ಮಲಪರೀಕ್ಷೆ ಮಾಡಿಸಿಕೊಳ್ಳಬೇಕು.
2. ಸಾಕಷ್ಟು ಹೆಚ್ಚಾಗಿ ನೀರು ಕುಡಿಯಿರಿ.